ಫ್ಯಾಕ್ಸ್ / Fax : 080-25586321
ಈಮೇಲ್ / Email : ho@kspcb.gov.in
ವೆಬ್‌ಸೈಟ್ / Website : http://kspcb.gov.in

080-25581383, 25589112
080-25589113, 25589114

# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
# Karnataka State Pollution Control Board

"ಪರಿಸರ ಭವನ", 1 ರಿಂದ 5ನೇ ಮಹಡಿಗಳು, ನಂ. 49, ಚರ್ಚ್ ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ ರಾಜ್ಯ, ಭಾರತ
"Parisara Bhavan", 1st to 5th Floor, # 49, Church Street, Bangalore - 560 001, Karnataka State, India

ಸಂಖ್ಯೆ:ಮಾನಿಮಂ/ಮುಪಅ/ಎಕ್ಯೂಎಂಸಿ/ದೀಪಾವಳಿ /2021/ 3694 ದಿನಾಂಕ:27-10-2021

27 OCT 2021

ರವಾನಿಸಲಾಗಿದೆ

## ಕಛೇರಿ ಆದೇಶ

ವಿಷಯ : ದೀಪಾವಳಿ 2021 ಹಬ್ಬದ ಸಂದರ್ಭದಲ್ಲಿ ಶಬ್ಧ ಮತ್ತು ವಾಯು ಗುಣಮಟ್ಟ ಮಾಪನ ಮಾಡುವ ಬಗ್ಗೆ.

ಉಲ್ಲೇಖ : 1) ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ನಿರ್ದೇಶನಾಲಯ ಬೆಂಗಳೂರು ರವರ ಪತ್ರ ಸಂಖ್ಯೆ: F.Tech-40/ Deepawali/RD-Bengaluru/2021-22/ Dtd:14-10-2021.
2) ಉಲ್ಲೇಖಿತ ಮಂಡಳಿ ಕಛೇರಿ ಆದೇಶ ಸಂ.ಮಾನಿಮಂ/ಮುಪಅ/ಎಕ್ಯೂಎಂಸಿ/ದೀಪಾವಳಿ /2021/3624(A), ದಿನಾಂಕ:22-10-2021

*****

ಉಲ್ಲೇಖಿತ ಕಛೇರಿ ಆದೇಶ(2) ಮುಂದುವರಿಸಿ ಈ ಕೆಳಕಂಡ ಹೆಚ್ಚುವರಿ ಅಂಶಗಳನ್ನು ಪಾಲನೆಗೆ ಸೂಚಿಸಿದೆ.

(ಅ) ಪರಿವೇಷ್ಟಕ ವಾಯು ಗುಣಮಟ್ಟ ಮಾಪನವನ್ನು ಬೆಂಗಳೂರು ನಗರದ 3 ಮಾಪನ ಕೇಂದ್ರಗಳಾದ ಯಶವಂತಪುರ ಪೊಲೀಸ್ ಠಾಣೆ, ಸೆಂಟ್ರಲ್ ಸಿಲ್ಕ ಬೋರ್ಡ್ ಮತ್ತು ಟೇರಿ ಕಛೇರಿ, ದೊಮ್ಮಲೂರುನಲ್ಲಿ ನಡೆಸುವುದು.

(ಆ) ಸದರಿ ಮಾಪನ ಕಾರ್ಯಕ್ರಮದ ಸಮನ್ವಯಕ್ಕಾಗಿ ಪರಿಸರ ಪ್ರಯೋಗಾಲಯದ ಶ್ರೀ ಬಿ.ಎಂ. ಶ್ರೀಧರ್ ನಾಯಕ್, ವೈಜ್ಞಾನಿಕ ಅಧಿಕಾರಿ ಹಾಗೂ ಶ್ರೀ ರಾಘವೇಂದ್ರ, ಉಪ ವೈಜ್ಞಾನಿಕ ಅಧಿಕಾರಿಯನ್ನು ನಿಯೋಜಿಸಿದೆ. ಇವರಿಗೆ ಸದರಿ ಕಾರ್ಯಕ್ಕಾಗಿ ವಾಹನದ ವ್ಯವಸ್ಥೆ ಮಾಡಲು ಮುಖ್ಯ ಆಡಳಿತಾಧಿಕಾರಿಗೆ ಸೂಚಿಸಿದೆ.

(ಇ) ಸದರಿ ಅಧಿಕಾರಿಗಳಿಗೆ ಶಬ್ದ ಮತ್ತು ವಾಯು ಗುಣಮಟ್ಟ ಮಾಪನ ವರದಿಗಳನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ನಿಗದಿಪಡಿಸಿದ ನಮೂನೆಯಲ್ಲಿ ದಿನಾಂಕ:15-11-2021ರೊಳಗೆ ಇಮೇಲ್ ಹಾಗೂ ಶುದ್ಧ ಪ್ರತಿ ಮೂಲಕ ಕಳುಹಿಸುವುದು.(ಈ-ಮೇಲ್: centrallab@kspcb.gov.in, aqmc@kspcb.gov.in)

(ಈ) ಸಮನ್ವಯ ಅಧಿಕಾರಿಗಳು ಕ್ರೂಡಿಕರಿಸಿದ ವರದಿಯನ್ನು ಸಿದ್ದಪಡಿಸಿ ಸದಸ್ಯ ಕಾರ್ಯದರ್ಶಿಗಳಿಂದ ಅನುಮೋದಿಸಿ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಗೆ ದಿನಾಂಕ:17-11-2021ರೊಳಗೆ ಕಳುಹಿಸಲು ಕ್ರಮವಹಿಸುವುದು.

(ಉ) ಪ್ರಾದೇಶಿಕ ಕಛೇರಿ ಹಿರಿಯ ಪರಿಸರ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿನ ಮಾಪನ ಕಾರ್ಯವನ್ನು ಮೇಲುಸ್ತುವರಿ ನಡೆಸುವುದು.

(ಊ) ಕ್ಷೇತ್ರ ಸಹಾಯಕರಿಲ್ಲದಿರುವ / ಕೊರತೆ ಇರುವ ಕಛೇರಿಗಳಲ್ಲಿ ಮಾಪನ ಕಾರ್ಯಕ್ಕೆ ನೈಪುಣ್ಯ ಹೊಂದಿರುವ ಅಭ್ಯರ್ಥಿಗಳನ್ನು ಅಗತ್ಯಕ್ಕೆ ತಕ್ಕಂತೆ ತಾತ್ಕಾಲಿಕವಾಗಿ (15 ದಿನಗಳಿಗೆ ಮಾತ್ರ) ಪ್ರತಿ ಅಭ್ಯರ್ಥಿಗೆ ಪ್ರತಿ ದಿನಕ್ಕೆ ರೂ.300/-ಗಳಂತೆ ಸಂಬಂಧಪಟ್ಟ ಪ್ರಾದೇಶಿಕ ಅಧಿಕಾರಿಗಳು ನಿಯೋಜಿಸಿಕೊಂಡು Contigency ವೆಚ್ಚದಲ್ಲಿ ಭರಿಸುವುದು.

ಋ) ವಾಯು ಮಾಪನ ಉಪಕರಣ ತೊಂದರೆ ಬಂದಲ್ಲಿ M/s. Envirotech Instruments Pvt Ltd., ಅಥವಾ ಸ್ಥಳಿಯ ಟೆಕ್‌ನೀಶಿಯನ್ಸ್ ರವರಿಂದ ಸಹಾಯ ಪಡೆದು ಸರಿಪಡಿಸಿಕೊಳ್ಳುವುದು.

ಎ) ಮಾಪನ ಉಪಕರಣ ಲಭ್ಯವಿಲ್ಲದ ಕಛೇರಿಗಳಲ್ಲಿ ಪರಿಸರ (ಸಂರಕ್ಷಣಾ) ಕಾಯ್ದೆ, 1986ರಡಿ ಮಾನ್ಯತೆ ಹೊಂದಿದ ಪ್ರಯೋಗಶಾಲೆಗಳಿಂದ/EPA Recognised laboratories /ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಅನುಬಂಧ-1ರ ನಮೂನೆಯಲ್ಲಿ ನಿಗದಿಪಡಿಸಿರುವ ಅಂಶಗಳನ್ನು ಮಾಪನ ಮಾಡುವ ಸಾಮರ್ಥ್ಯ ಹೊಂದಿರುವ ಉಪಕರಣವನ್ನು ಬಳಸತಕ್ಕದ್ದು ಹಾಗೂ ಸದರಿ ಮಾಪನ ವೆಚ್ಚ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಸೂಚನೆ ಲೀಗಲ್ 42(3)/87, ದಿನಾಂಕ:24-10-2016ರಲ್ಲಿ ನಿಗದಿಪಡಿಸಿರುವ ಮೊತ್ತ ಮೀರತಕ್ಕದಲ್ಲ ಹಾಗೂ ಸದರಿ ಮಾಪನ ಕಾರ್ಯಕ್ಕೆ ಸಂಬಂಧಸಿದಂತೆ KTPP ಕಾಯ್ದೆ ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು.

ಸಹಿ/-
**ಸದಸ್ಯ ಕಾರ್ಯದರ್ಶಿ**

**ಇವರಿಗೆ:**

1) ಎಲ್ಲಾ ಪ್ರಾದೇಶಿಕ ಅಧಿಕಾರಿಗಳು, ಪ್ರಾದೇಶಿಕ ಕಛೇರಿ, ಕ.ರಾ.ಮಾ.ನಿ.ಮಂ.
2) ಎಲ್ಲಾ ಹಿರಿಯ ಪರಿಸರ ಅಧಿಕಾರಿಗಳು, ಕ.ರಾ.ಮಾ.ನಿ.ಮಂ.
3) ಮುಖ್ಯ ವೈಜ್ಞಾನಿಕ ಅಧಿಕಾರಿ, ಕೇಂದ್ರ ಪರಿಸರ ಪ್ರಯೋಗಾಲಯ, ನಿಸರ್ಗ ಭವನ, ಬೆಂಗಳೂರು.
4) ಶ್ರೀ ಬಿ.ಎಂ. ಶ್ರೀಧರ್ ನಾಯಕ್, ವೈಜ್ಞಾನಿಕ ಅಧಿಕಾರಿ ಹಾಗೂ ಶ್ರೀ ರಾಘವೇಂದ್ರ, ಉಪ ವೈಜ್ಞಾನಿಕ ಅಧಿಕಾರಿ.

**ಪ್ರತಿಯನ್ನು:**

1) ಮುಖ್ಯ ಹಣಕಾಸು ಅಧಿಕಾರಿಗಳು ಇವರ ಮಾಹಿತಿಗಾಗಿ ಹಾಗೂ ಪ್ರಾದೇಶಿಕ ಅಧಿಕಾರಿಗಳ ಕೋರಿಕೆಯ ಮೇರೆಗೆ ಹಣ ಬಿಡುಗಡೆ ಮಾಡುವುದು.
2) ಮುಖ್ಯ ಆಡಳಿತಾಧಿಕಾರಿಗಳು ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
3) ಎಲ್ಲಾ ಪ್ರಾದೇಶಿಕ ಪ್ರಯೋಗಾಲಯದ ಮುಖ್ಯಸ್ಥರುಗಳ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

**ಸದಸ್ಯ ಕಾರ್ಯದರ್ಶಿ**